# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ

## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-13

Cw-28

| | |
|---|---|
| ಸಾಕ್ಷಿದಾರರ ಹೆಸರುಃ | ಲೋಕೇಶ್ |
| ತಂದೆಃಗಂಡನ ಹೆಸರುಃ | ಕುಮಾರ |
| ವಯಸ್ಸುಃ | 38 ವರ್ಷ |
| ಉದ್ಯೋಗಃ | ಪಿಡಿಒ, ನಾಗರಾಳ ಗ್ರಾಮ ಪಂಚಾಯತಿ |
| ವಾಸ ಸ್ಥಳಃ | ನಾಗರಾಳ |

ದಿನಾಂಕ:**14.10.2024** ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

2018 ರಿಂದ ಅಕ್ಟೋಬರ್ 2023 ವರೆಗೆ ಯತ್ತಿನಹಳ್ಳಿ ಗ್ರಾಮದ ಪಿಡಿಒ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ18.03.2021 ರಂದು ಪೊಲೀಸರು ನನಗೆ ಯತ್ತಿನಹಳ್ಳಿ ಗ್ರಾಮದ ಘಟನೆ ನಡೆದ ಸ್ಥಳದ ಬಗ್ಗೆ ಉತಾರ ಕೋರಿದ್ದು, ಅದನ್ನು ಪೂರೈಸಿರುತ್ತೇನೆ. ಅವುಗಳನ್ನು ನಿಪಿ-56 ರಿಂದ 58, ಸಾಕ್ಷಿ ಸಹಿ ನಿಪಿ-56(ಎ), ನಿಪಿ-57(ಎ), ನಿಪಿ-58(ಎ) ಅಂತಾ ಗುರುತಿಸಲಾಯಿತು. ಮಾಲೀಕನ ಹೆಸರು ಶಿವಾನಂದ ಅಂತಾ ಇದೆ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ

ನಿಪಿ-56 ರಿಂದ 58 ಬೇರೆ-ಬೇರೆ ಆಸ್ತಿ ನಂಬರ್ ಇದೆ. ಅದರಲ್ಲಿ ಮನೆ ಮತ್ತು ಬಯಲು ಜಾಗ ಅಂತಾ ಇದೆ. ವಾಣಿಜ್ಯ ಮಳಿಗೆಗಳು ಅಂತಾ ಇಲ್ಲ. ಅಳತೆ ಬರೆದಿಲ್ಲ. ವಾಣಿಜ್ಯ ಮಳಿಗೆಗಳಿಗೆ, ಮನೆಗಳಿಗೆ ಸಂಬಂಧಪಟ್ಟಂತೆ ಬೇರೆ-ಬೇರೆ ಟ್ಯಾಕ್ಸ್ ವಿಧಿಸುತ್ತೇವೆ. ಪೊಲೀಸರ ಮಾತು ಕೇಳಿ ಸುಳ್ಳು ನಿಪಿ-56 ರಿಂದ 58ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಇ-ಸ್ವತ್ತು ಉತಾರಕ್ಕೆ ಅರ್ಜಿ ಸಲ್ಲಿಸಿದವರು ಮಾತ್ರ ಬಳಸಬೇಕೆಂದು ನಮೂದು ಇದೆ ಎಂದರೆ ಸರಿ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.